ಏಕ ಸದಸ್ಯ ಆಯೋಗವನ್ನು ರಚಿಸುವ ಬಗ್ಗೆ

೧೧೩೨ (ಎ) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಗುಲ್ಬರ್ಗಾ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕೇಂದ್ರಗಳನ್ನು ಗುರುತಿಸಿ ಪ್ರಾರಂಭಿಸುವ ವಿಚಾರದಲ್ಲಿ ಏಕ ಸದಸ್ಯ ಆಯೋಗವನ್ನು ರಚಿಸಿರುವುದು ಸಹಜವೇ ?

೨) ಆಯೋಗವು ಆದರ ವರದಿಯನ್ನು ಸಲ್ಲಿಸಿರುವುದೆ ?

೩) ಹಾಗಿದ್ದಲ್ಲಿ, ಆಯೋಗವು ಸ್ನಾತ ಕೋತ್ತರ ಕೇಂದ್ರಗಳನ್ನು ಗುರುತಿಸಲಾಗಿರುವ ಕೇಂದ್ರ ಗಳಾವುವು (ದಯವಿಟ್ಟು ವಿವಿಧ ಕೋಸುಗಳನ್ನು ಪ್ರಾರಂಭಿಸುವ ಬಗ್ಗೆ ತಿಳಿಸುವುದು) ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

೧) ಹೌದು.

೨) ಹೌದು.

೩) ಬಳ್ಳಾರಿ, ರಾಯಚೂರು ಮತ್ತು ಬಿದರೆ.

ಬಳ್ಳಾರಿಯಲ್ಲಿ :

———

೧) ಬಿಸಿನೆಸ್ ಮ್ಯಾನೇಜ್‌ಮೆಂಟ್ ಅಥವಾ ಎಂ.ಕಾಂ. ರಸಾಯನಶಾಸ್ತ್ರ (ಬಯೋ ಕೆಮಿಸ್ಟ್ರಿ) ಭೌತಶಾಸ್ತ್ರ.

ರಾಯಚೂರಿನಲ್ಲಿ :

———

೨) ಎಂ. ಫಾರ್ಮ್, ಗ್ರಾಮೀಣ ಅಭಿವೃದ್ಧಿಯಲ್ಲಿ ಒಂದು ಸ್ನಾತಕೋತ್ತರ ಡಿಪ್ಲೊಮಾ ಅಥವಾ ಡಿಗ್ರಿ.

ಬೀದರ್‌ನಲ್ಲಿ

———

೩) ಸಕ್ಕರೆ ವಿಜ್ಞಾನದಲ್ಲಿ ಸ್ನಾತಕೋತ್ತರ ಅಥವಾ ಡಿಪ್ಲೊಮಾ.

ಸವಣನೂರು ಶರೇವಾಡ ರಸ್ತೆ ದುರಸ್ತಿ ಬಗ್ಗೆ

೧೨೦೮ ಶ್ರೀ ಬಿ. ಎ. ಉಪ್ಪಿನ (ಕುಂದಗೋಳ).— ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವಣೂರ-ಶರೇವಾಡ ರಸ್ತೆ ಬಸ್ ಸಂಚಾರಕ್ಕೆ ಯೋಗ್ಯವಲ್ಲವೆಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಬಸ್ ಓಡಾಟವನ್ನು ನಿಲ್ಲಿಸಲು ವಿಚಾರ ಮಾಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಬಗ್ಗೆ ಸರಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ, ನೀರಾವರಿ ಸಚಿವರು).—

ಅ) ಈ ಮಾರ್ಗದಲ್ಲಿ ಬಸ್ ಓಡಾಟವನ್ನು ನಿಲ್ಲಿಸಿಲ್ಲ.

ಆ) (ಅ) ಗೆ ಕೊಟ್ಟಿರುವ ಉತ್ತರದಿಂದ, ಇದು ಉದ್ಭವಿಸುವುದಿಲ್ಲ.